# ಬೇಲೂರಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 29/2019 PW4

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ. ಜಿ ಟಿ ಪಿ ವಕೀಲರಿಂದಃ**

ನಾನು **2018** ರಿಂದ ಟ್ರಾಕ್ಟರ್ ಚಾಲನೆ ಮಾಡಿಕೊಂಡು ಬರುತ್ತಿದ್ದೇನೆ. ನನಗೆ ಟ್ರಾಕ್ಟರ್ ಚಾಲನೆ ಮಾಡಲು ಚಾಲನಾ ಪರವಾನಗಿ ಇರುವುದಿಲ್ಲ. ಸದರಿ ದಿನ ನಾನು ಶುಂಠಿಯನ್ನು ಹಳೇಬೀಡು ರಸ್ತೆ ಮಲೆನಾಡು ವಾಷಿಂಗ್ ಪಾಯಿಂಟ್ ನಲ್ಲಿ ಇಳಿಸಿ ಹೋಗುತ್ತಿದ್ದೆ. ಸದರಿ ದಿನ ರಾತ್ರಿ **10-20** ಗಂಟೆಗೆ ಮಲೆನಾಡು ವಾಷಿಂಗ್ ಪಾಯಿಂಟ್ ನಿಂದ ಹೊರೆಟಿದ್ದೆ. ಸದರಿ ದಿನ ಟ್ರಾಕ್ಟರ್ ನಲ್ಲಿ ನಾನು ಒಬ್ಬನೇ ಇದ್ದೆ. ಅಪಘಾತ ಆದಾಗ ರಾತ್ರಿ **10-45** ಆಗಿರುತ್ತದೆ. ಆ ಸಮಯದಲ್ಲಿ ಕತ್ತಲು ಇತ್ತು ಎಂದರೆ ಸರಿ . ಸದರಿ ಅಪಘಾತ ಆದ ಸ್ಥಳದಲ್ಲಿ ತಿರುವು ಇದೆ ಎಂದರೆ ಸರಿ . ಚಿಕ್ಕಮಗಳೂರು ಕಡೆಯಿಂದ ಸದರಿ ತಿರುವು ಬಳಿ ಬರುವಾಗ ರಸ್ತೆಯಲ್ಲಿ Humps ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ನಾನು ಅಪಘಾತ ಆದ ನಂತರ ಚಿಕ್ಕಮಗಳೂರಿನ ಸರ್ಕಾರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ರಾತ್ರಿ **12** ರಿಂದ **12-30** ಆಗಿದ್ದು ನನ್ನನ್ನು ನನ್ನ ಅಣ್ಣ ಕರೆದುಕೊಂಡು ಹೋಗಿದ್ದರು.

2. ನಾನು ಆಸ್ಪತ್ರೆಯಲ್ಲಿ ವೈದ್ಯರ ಬಳಿ ನನಗೆ ಯಾವ ರೀತಿ ಏಟು ಆಗಿರುತ್ತದೆ ಎಂದು ಹೇಳಿರುತ್ತೇನೆ. ನಾನು ನನಗೆ ನೋವು ಬಂದಿರುತ್ತದೆ ಎಂದು ವೈದರ ಬಳಿ ಹೇಳಿರುತ್ತೇನೆ. ಸದರಿ ದಿನ  ಅಪಘಾತ ಆದ ನಂತರ ಸ್ದಳಕ್ಕೆ  ಪೊಲೀಸರು ಬಂದಿದ್ದರು. ಪೊಲೀಸರು ಸ್ದಳಕ್ಕೆ ಬಂದು ನನ್ನನ್ನು ವಿಚಾರಿಸಿ ಮಾರನೇ ದಿನ ಬೆಳಗ್ಗೆ ಬರುವಂತೆ ಹೇಳಿದ್ದರು. ಅಪಘಾತದ ಬಗ್ಗೆ ನಾನು ದೂರು ನೀಡಿರುತ್ತೇನೆ. ನಾನು ಪೊಲೀಸರಿಗೆ ದೂರನ್ನು ನೀಡುವಾಗ 11 ಗಂಟೆ ಆಗಿತ್ತು. ನಾನು ದೂರು ನೀಡುವವರೆಗೂ  ಟ್ರಾಕ್ಟರ್ ಅಪಘಾತದ ಸ್ದಳದಲ್ಲೆ ರಸ್ತೆಯಲ್ಲೇ ಇತ್ತು. ನಾನು ದೂರನ್ನು ನೀಡಿದ ನಂತರ ಅಪಘಾತ ಆದ ಸ್ದಳಕ್ಕೆ ಚಾಸಾ1 ಮತ್ತು ಚಾಸಾ5 ರವರ ಜೊತೆ ಹೋಗಿದ್ದೆ. ನನ್ನನ್ನು ಹೊರತುಪಡಿಸಿ ಬೇರೆ ಯಾರಿಗೂ ಸದರಿ  ಅಪಘಾತದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ . ಸದರಿ  ಅಪಘಾತ ಸ್ದಳಕ್ಕೆ ಸಂಜೆ 6-10 ಕ್ಕೆ ಹೋಗಿದ್ದು ಸಂಜೆ 7 ಗಂಟೆಗೆ ವಾಪಾಸು ಬಂದಿರುತ್ತೇನೆ. ನಾನು ದೂರನ್ನು ನೀಡಿದ ನಂತರ  ಪೊಲೀಸರು ಸ್ದಳಕ್ಕೆ ಬರುವವರೆಗೂ ಅಪಘಾತ ಸ್ದಳದಲ್ಲೆ ಇದ್ದೆ.

3. ಸದರಿ  ಅಪಘಾತದಲ್ಲಿ ಬಸ್ಸಿನ ಚಾಲಕನಿಗೆ 2 ಕಾಲುಗಳಿಗೂ ಏಟು ಆಗಿ , 2 ಕಾಲು ಮುರಿದಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.  ಅಪಘಾತ ಆಯಿತು ಎಂದು ಹೇಳಿದ ಸಮಯದ 10 ನಿಮಿಷದಲ್ಲಿ ಬೇಲೂರು ಪೊಲೀಸರು ಮತ್ತು ಅಂಬೂಲೆನ್ಸ್ ನವರು ಸ್ದಳಕ್ಕೆ ಬಂದು ಬಸ್ಸಿನ ಚಾಲಕನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ಸ್ದಳದಲ್ಲಿ ಇದ್ದು ನನ್ನನ್ನೂ ಕೂಡ ಬಸ್ಸಿನ ಚಾಲಕನೊಂದಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಾನು ಅಲ್ಲಿಂದ ಪೊಲೀಸರಿಗೆ ತಿಳಿಯದಂತೆ ಹೋಗಿದ್ದೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಮದ್ಯಪಾನ ಮಾಡಿದ್ದೆ, ವೈದ್ಯಕೀಯ ಪರೀಕ್ಷೆ ನಡೆಸಿದ್ದಲ್ಲಿ ಸತ್ಯಾಂಶ ಹೊರ ಬರುತ್ತದೆ ಎಂದು  ನಾನು ಆಸ್ಪತ್ರೆಯಿಂದ ತಪ್ಪಿಸಿಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ.

4. ನಿಪಿ 5 ಮಹಜರನ್ನು ಪೊಲೀಸರು ಬರೆದ ನಂತರ ನನಗೆ ಓದಿ ಹೇಳಿಲ್ಲ. ನಿಪಿ 5 ಮಹಜರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ 5 ಮತ್ತು ಚಾಸಾ 6 ನನ್ನ ಮಾಲೀಕರ ಸಂಬಂಧಿಕರು ಎಂದರೆ ಸರಿ . ನನ್ನ ಸಮಕ್ಷಮ ಯಾವುದೇ ಮಹಜರು ಕ್ರಮ ಜರುಗಿಸಿಲ್ಲ , ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ 05-11-2018 ರಂದು ನಾನುಹೇಳಿರುವಂತೆ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಸರಿಯಾಗಿ ಟ್ರಾಕ್ಟರ್ ಚಾಲನೆ ಮಾಡಲು ಬರದೇ ಇದ್ದುದ್ದರಿಂದ ನನ್ನ ನಿರ್ಲಕ್ಷತನದಿಂದ ಮತ್ತು ನನ್ನ ತಪ್ಪಿನಿಂದ ಸದರಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಸದರಿ ಅಪಘಾತ ಆಗಿರುವುದರಿಂದ ನಾನು ಅಪಘಾತ ಆದ ದಿನವೇ ಪೊಲೀಸರಿಗೆ ದೂರುಎ ನೀಡದೇ ಮಾರನೇ ದಿನ ಚಾಸಾ 1 ರವರ ಮೂಖಾಂತರ ಸುಳ್ಳು ದೂರು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಒಂದು ವೇಳೆ ಕೆ ಎಸ್ ಆರ್ ಟಿ ಸಿ ಬಸ್ಸು ಅತಿವೇಗ ವಾಗಿ ಬಂದು ಟ್ರಾಕ್ಟರ್ ಗೆ ಡಿಕ್ಕಿ ಹೊಡೆದಿದ್ದೆ ಇದ್ದಲ್ಲಿ ನನಗೆ ತೀವ್ರ ಸ್ವರೂಪದ ಗಾಯ ಆಗುತ್ತಿತ್ತು ಎಂದರೆ ಸಾಕ್ಷಿ ಯು ವಾಹನದಿಂದ ನಾನು ಜಂಪ್ ಮಾಡಿದ್ದೆ ಎನ್ನುತ್ತಾರೆ. ನಾನು ಜಂಪ್ ಮಾಡಿರುವ ಬಗ್ಗೆ ಮಹಜರು ಮಾಡಲು ಪೊಲೀಸರು ಬಂದಿದ್ದಾಗ ಪೊಲೀಸರ ಬಳಿ ಹೇಳಿದ್ದೆ. ನಾನು ಜಂಪ್ ಮಾಡಿದ್ದೆ ಇದ್ದಲ್ಲಿ ನನಗೆ ಕೈಕಾಲುಗಳಿಗೆ ತರಚಿದ ಗಾಯಗಳು ಆಗುತ್ತಿತ್ತು ಎಂದರೆ ನನಗೆ ಅಂತಹ ಯಾವುದೇ ಗಾಯಗಳು ಆಗಿಲ್ಲ. ನಾನು ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಪೊಲೀಸರು ನನ್ನಿಂದ ಯಾವುದೇ ದಾಖಲಾತಿ ಪಡೆದಿಲ್ಲ. ದಿಃ 05-11-2018 ರಂದು ಕೆ ಎಸ್ ಆರ್ ಟಿ ಸಿ ಬಸ್ಸು ನೋ. ಸಂ. ಕೆ ಎ 18 ಎಫ್ 944 ರ ಬಸ್ಸಿನ ಚಾಲಕನ ತಪ್ಪಿನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಬಸ್ಸಿನ ಚಾಲಕನ ಬಸ್ಸನ್ನು

ಅತಿವೇಗ ಮತ್ತು ಆಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ನಾನೇ ಟ್ರಾಕ್ಟರ್ ಅನ್ನು ಅತಿವೇಗ ವಾಗಿ ಚಲಾಯಿಸಿಕೊಂಡು ಹೋಗಿ ಅಪಘಾತಪಡಿಸಿ ಟ್ರಾಕ್ಟರ್ ಪಲ್ಟಿ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕಾರಣದಿಂದ ನನಗೆ ಯಾವುದೇ ಗಾಯಗಳು ಆಗಿಲ್ಲ , ನಾನು ಈ ಕಾರಣಕ್ಕೆ ಬೇಲೂರು ಅಥವಾ ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ . ನನ್ನ ತಪ್ಪಿನಿಂದ ಆದ ಅಪಘಾತವನ್ನು ಮರೆಮಾಚುವ ಉದ್ದೇಶದಿಂದ ಚಾಸಾ1 ರವರೊಂದಿಗೆ ಸೇರಿಕೊಂಡು ಸುಳ್ಳು ದೂರು ನೀಡಿ ಬಸ್ಸಿನ ಚಾಲಕನ ವಿರುದ್ದ ಸುಳ್ಳು ಪ್ರಕರಣ ನೀಡಿದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ನನ್ನ ಸಮಕ್ಷಮ ನಿಪಿ 5 ರಂತೆ ಮಹಜರನ್ನು ಅಪಘಾತ ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ , ನನ್ನ ನಿರ್ಲಕ್ಷತನದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಟ್ರಾಕ್ಟರ್ ನ ಪೋಟೋದಲ್ಲಿ ಟ್ರಾಕ್ಟರ್ ನೋಂದಣಿ ಸಂಖ್ಯೆ ಮತ್ತು ಟ್ರಾಕ್ಟರ್ ಕಂಪನಿ ಹೆಸರು ಕಾಣುತ್ತಿಲ್ಲ ಎಂದರೆ ಸರಿ. ಸದರಿ ಅಪಘಾತಕ್ಕೂ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರ ಮಾತು ಕೇಳಿ ಅವರಿಗೆ ಸಹಾಯ ಮಾಡಲು , ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ ಹಿರಿಯ ಸಿವಿಲ್ ನ್ಯಾಯಾಧೀಶರು

**CC**

ಮತ್ತು ಜೆ ಎಂ ಎಫ್ ಸಿ., ಬೇಲೂರು